ಆ) ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ಚಿತ್ರದುರ್ಗ ಜಿಲ್ಲೆಯ ಚಿತ್ರದುರ್ಗ ತಾಲ್ಲೂಕಿನ ರೈತರು ಚಳುವಳಿ ಮೂಲಕ ಸುಮಾರು 925 ಸಂಖ್ಯೆಯ ಮಾಪಕಗಳನ್ನು ವಾಪಸ್ ಕೊಟ್ಟಿರುತ್ತಾರೆ. ಸದರಿ ಮಾಪಕಗಳನ್ನು ಪುನಃ ಅಳವಡಿಸಲಾಗಿದೆ.

ಶಿವಮೊಗ್ಗ ಜಿಲ್ಲೆಯ ವ್ಯಾಪ್ತಿಯ ಸಾಗರ ವಿಭಾಗದ ಸೊರಬ ತಾಲ್ಲೂಕಿನಲ್ಲಿ 370 ಸಂಖ್ಯೆ ಗೃಹಬಳಕೆಯ ಮಾಪಕಗಳನ್ನು ತೆಗೆದು ಮೆಸ್ಕಾಂ ಉಪವಿಭಾಗೀಯ ಕಛೇರಿಯ ಮುಂದೆ ಹಾಕಿರುತ್ತಾರೆ.

ಇ) ಉದ್ಭವಿಸುವುದಿಲ್ಲ.

ತೆಂಗು ಬೆಳೆಗಾರರು

108(64); ಶ್ರಿ ಪುಟ್ಟಣ್ಣಯ್ಯ ಕೆ.ಎಸ್. (ಮೇಲುಕೋಟೆ)

ಅ) ರಾಜ್ಯದಲ್ಲಿ ಎಷ್ಟು ಜಿಲ್ಲೆಗಳಲ್ಲಿ ತೆಂಗನ್ನು ಪ್ರಮುಖ ಬೆಳೆಯನ್ನಾಗಿ ಬೆಳೆಯುತ್ತಿದ್ದಾರೆ;

ಆ) ಇರುವ ತೆಂಗಿನ ಮರಗಳ ಸಂಖ್ಯೆ ಎಷ್ಟು;

ಇ) ತೆಂಗಿನ ಮರಗಳು ಮತ್ತು ತೆಂಗು ಬೆಳೆಯುವ ರೈತರ ರಕ್ಷಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಡಾ: ಶಾಮನೂರು ಶಿವಶಂಕರಪ್ಪ (ಮಾನ್ಯ ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರು)

ಅ)

- ರಾಜ್ಯದಲ್ಲಿ 18 ಜಿಲ್ಲೆಗಳಲ್ಲಿ ತೆಂಗು ಬೆಳೆಯನ್ನು ಪ್ರಮುಖ ಬೆಳೆಯನ್ನಾಗಿ ಬೆಳೆಯುತ್ತಿದ್ದಾರೆ.

ಆ)

- ಅಂದಾಜು ತೆಂಗಿನ ಮರಗಳ ಸಂಖ್ಯೆ: 4.91 ಕೋಟಿಗಳು.

ಇ) ಕರ್ನಾಟಕದ ರಾಜ್ಯದಲ್ಲಿ ತೆಂಗು ಬೆಳೆಯ ಅಭಿವೃದ್ಧಿಗಾಗಿ ತೆಂಗು ಬೆಳೆಯುವ ಪ್ರಮುಖ 18 ಜಿಲ್ಲೆಗಳಲ್ಲಿ ತೆಂಗು ಅಭಿವೃದ್ಧಿ ಮಂಡಳಿಯ ಆರ್ಥಿಕ ಸಹಾಯದಲ್ಲಿ ಉತ್ಪಾದನಾ ಸುಧಾರಣಾ ಕಾರ್ಯ ಯೋಜನೆಗಾಗಿ ತೆಂಗಿನಲ್ಲಿ ಸಂಯೋಜಿತಾ ಬೇಸಾಯ ಯೋಜನೆಯಡಿ ಈ ಕೆಳಕಂಡ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ

- ಸಮಗ್ರ ತೆಂಗು ಬೇಸಾಯ ಘಟಕದಡಿ ಹೊಸ ಪ್ರಾತ್ಯಕ್ಷತೆ ತಾಕುಗಳ ಸ್ಥಾಪನೆ ಮತ್ತು ಹಳೆ ಪ್ರಾತ್ಯಕ್ಷತೆ ತಾಕುಗಳ ನಿರ್ವಹಣೆಗಾಗಿ ₹ 35,000/– ರಷ್ಟು ಸಹಾಯಧನವನ್ನು ಎರಡು ವರ್ಷಗಳ ಅವಧಿಗೆ ಒದಗಿಸಲಾಗುತ್ತಿದೆ.
- ರಾಜ್ಯ ಸರ್ಕಾರದ ಅನುದಾನದಡಿ 2012–13ನೇ ಸಾಲಿನಲ್ಲಿ 5523 ಹೆ. ಪ್ರದೇಶದಲ್ಲಿ ತೆಂಗಿನ ತೋಟದಲ್ಲಿ ಪ್ರಾತ್ಯಕ್ಷತೆ ತಾಕುಗಳನ್ನು ಅಭಿವೃದ್ಧಿಪಡಿಸಲು 2 ವರ್ಷಗಳ ಕಾರ್ಯಕ್ರಮಕ್ಕೆ ₹ 26250/–ಗಳ ಅನುದಾನವನ್ನು ಪ್ರತಿ ವರ್ಷಕ್ಕೆ ₹ 13125/– ರಂತೆ ಎರಡು ವಾರ್ಷಿಕ ಕಂತುಗಳಲ್ಲಿ ಸಹಾಯಧನವನ್ನಾಗಿ ನೀಡಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ 2ನೇ ಕಂತನ್ನು ವಿತರಿಸಲಾಗುತ್ತಿದೆ.
  ತೆಂಗು ಬೆಳೆಗೆ ತಗಲುವ ಕೀಟ ಹಾಗೂ ರೋಗಗಳ ನಿಯಂತ್ರಣಕ್ಕೆ ತೀವ್ರತೆಗೆ ಅನುಗುಣವಾಗಿ ಶೇ. 75 ರಷ್ಟು, ಪ್ರತಿ ಹೆಕ್ಟೇರಿಗೆ ಗರಿಷ್ಟ ₹ 5250/– ರಷ್ಟು ಸಸ್ಯ ಸಂಕ್ಷರಣಾ ಔಷಧಿಗಳನ್ನು, 2013–14ನೇ ಸಾಲಿನಲ್ಲಿ ಒಟ್ಟು 2271.4 ಹೆಕ್ಟೇರ ಪ್ರದೇಶದಲ್ಲಿ ವಿತರಿಸಲಾಗುತ್ತಿದೆ.
- ತೆಂಗು ಅಭಿವೃದ್ಧಿ ಮಂಡಳಿ ವತಿಯಿಂದ ಶೇ.50ರ ಸಹಾಯಧನದಲ್ಲಿ ಹಾಗೂ ರಾಜ್ಯದ ಪಾಲಿನ ಮೊತ್ತ ಶೇ.50 ರೊಂದಿಗೆ ಕೆ.ಆರ್.ಎಸ್. ಫಾರಂ, ಮಂಡ್ಯ ಜಿಲ್ಲೆಯಲ್ಲಿ TXD ಅಥವಾ DXT ತೆಂಗಿನ ಸಂಕರಣ ಸಸಿಗಳನ್ನು ಉತ್ಪಾದಿಸಲಾಗಿದೆ. ಸದರಿ ಕಾರ್ಯಕ್ರಮದಿಂದಾಗಿ ಉತ್ತಮ ಗುಣಮಟ್ಟದ ತೆಂಗಿನ ಸಸಿಗಳನ್ನು ರೈತರಿಗೆ ನಿಗಧಿತ ದರದಲ್ಲಿ ವಿತರಿಸಿ ತೆಂಗಿನ ಉತ್ಪಾದನೆ ಹಾಗೂ ಉತ್ಪಾದಕತೆಯನ್ನು ಹೆಚ್ಚಿಸಲಾಗುವುದು.

- ದಕ್ಷಿಣ ಕನ್ನಡ ಜಿಲ್ಲೆಯ ಬಂಡ್ವಾಳ ತಾಲ್ಲೂಕಿನ, ತುಂಬೆ ತೋಟಗಾರಿಕೆ ಕ್ಷೇತ್ರದಲ್ಲಿ ನೀರಾ ಸಂಸ್ಕರಣಾ ಪ್ರಾತ್ಯಕ್ಷತೆ ಘಟಕವನ್ನು Defence Food Research Laboratory (DFRL), ಮೈಸೂರು– ಇವರ ತಾಂತ್ರಿಕ ನೆರವಿನಿಂದ ಸ್ಥಾಪಿಸಲಾಗಿದೆ.
- ತೋಟಗಾರಿಕೆ ಇಲಾಖೆಯು ರಾಜ್ಯದ ವಿವಿಧ ಭಾಗಗಳಲ್ಲಿ 40 ಪರೋಪಜೀವಿ ಉತ್ಪಾದನಾ ಪ್ರಯೋಗ ಶಾಲೆಗಳನ್ನು ತೆರೆದಿದ್ದು, ಈ ಪ್ರಯೋಗಶಾಲೆಗಳಲ್ಲಿ ತೆಂಗಿನ ಕಪ್ಪುತಲೆ ಹುಳುವಿನ ನಿಯಂತ್ರಣೆಗಾಗಿ ವಿವಿಧ ಬಗೆಯ ಪರೋಪಜೀವಿಗಳನ್ನು ಉತ್ಪಾದಿಸಿ ಕೀಟ ಬಾಧೆ ಇರುವ ರೈತರ ತೋಟಗಳಲ್ಲಿ ಉಚಿತವಾಗಿ ಬಿಡುಗಡೆ ಮಾಡಲಾಗುತ್ತಿದೆ.
- ಉತ್ತಮ ಗುಣಮಟ್ಟದ ಬೀಜದ ತೆಂಗಿನ ಕಾಯಿಗಳನ್ನು ಸಂಗ್ರಹಿಸಿ ಇಲಾಖೆಯ ವಿವಿಧ ಸಸ್ಯಾಗಾರಗಳಲ್ಲಿ ತೆಂಗಿನ ಸಸಿಗಳನ್ನು ಉತ್ಪಾದಿಸಿ ಉತ್ತಮ ಗುಣಮಟ್ಟದ ತೆಂಗಿನ ಸಸಿಗಳನ್ನು ರೈತರಿಗೆ ವಿತರಿಸುವ ಮೂಲಕ ತೆಂಗು ಬೆಳೆಯ ಪ್ರದೇಶಾಭಿವೃದ್ಧಿ ಮಾಡಲಾಗುತ್ತಿದೆ.
- 2013–14ನೇ ಸಾಲಿನ ಆಯವ್ಯಯದಲ್ಲಿ ತೆಂಗು ಪಾರ್ಕ್‌ಗಳ ಸ್ಥಾಪನೆ (S-10) ಯೋಜನೆಯಡಿ ₹ 1.00 ಕೋಟಿಗಳ ಅನುದಾನವನ್ನು ನಿಗದಿಪಡಿಸಲಾಗಿದ್ದು, ತುಮಕೂರು ಜಿಲ್ಲೆಯ ತಿಪಟೂರು, ಶಿರಾ ಮತ್ತು ತುರುವೇಕೆರೆ ಹಾಗೂ ಮಂಡ್ಯ ಜಿಲ್ಲೆಯ ಮದ್ದೂರು ಮತ್ತು ಜವರನಹಳ್ಳಿಗಳಲ್ಲಿ ತೆಂಗು ಪಾರ್ಕ್‌ಗಳನ್ನು ಸ್ಥಾಪಿಸಲು ಕೈಗೊಳ್ಳಲಾಗುತ್ತಿದೆ.
- 2013ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ FAQ ಗುಣಮಟ್ಟದ ಕೊಬ್ಬರಿಗೆ ಪ್ರತಿ ಕ್ವಿಂಟಾಲ್‌ಗೆ ₹ 5,500/– ಕನಿಷ್ಠ ಬೆಂಬಲ ಬೆಲೆ ಎಂದು ಘೋಷಿಸಿರುತ್ತಾರೆ. ಇದಕ್ಕೆ ರಾಜ್ಯ ಸರ್ಕಾರದ ಹೆಚ್ಚುವರಿ ಪ್ರೋತ್ಸಾಹಧನ ₹ 1000/–

ಗಳು ಸೇರಿದಂತೆ ಪ್ರತಿ ಕ್ವಿಂಟಾಲ್‌ಗೆ ಒಟ್ಟು ₹ 6500/– ಗಳನ್ನು ನೀಡಲಾಗಿದೆ.

- ತೆಂಗು ಬೆಳೆ ವಿಮೆ ಯೋಜನೆಯನ್ನು ತೆಂಗು ಬೆಳೆಯುವ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, 2013–14ನೇ ಸಾಲಿನಲ್ಲಿ ಸದರಿ ಕಾರ್ಯಕ್ರಮಕ್ಕಾಗಿ ₹ 25.00 ಲಕ್ಷಗಳ ಅನುದಾನ ನಿಗದಿಯಾಗಿದ್ದು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.
- ತೆಂಗು ಉತ್ಪನ್ನಗಳನ್ನು ಉತ್ಪಾದಿಸುವ ಘಟಕಗಳನ್ನು ನಿರ್ಮಿಸಲು ಇಚ್ಛಿಸಿರುವ ಫಲಾನುಭವಿಗಳಿಗೆ ರಾಜ್ಯ ಸರ್ಕಾರದಿಂದ ಶೇ. 25 ರಷ್ಟು ಹಾಗೂ ತೆಂಗು ಬೆಳೆ ಅಭಿವೃದ್ಧಿ ಮಂಡಳಿಯಿಂದ ಶೇ. 25 ರಷ್ಟು ಸಹಾಯಧನ ನೀಡಲಾಗುತ್ತಿದೆ.
- ತೆಂಗು ಬೆಳೆಗೆ ಹನಿ ನೀರಾವರಿ ಅಳವಡಿಕೆಗೆ ರಾಜ್ಯ ಸರ್ಕಾರದಿಂದ ಶೇ. 90 ರಷ್ಟು ಸಹಾಯಧನ ನೀಡಲಾಗುತ್ತಿದೆ.
- 2013–14ನೇ ಸಾಲಿನಲ್ಲಿ ಬರಪೀಡಿತ ತೆಂಗು ತೋಟಗಳ ಪುನಶ್ಚೇತನ ಯೋಜನೆಯನ್ನು ಹಾನಿಗೊಳಗಾದ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲು ದಿನಾಂಕ: 30.11.2013ರಂದು ₹ 40.00 ಕೋಟಿಗಳ ಅನುದಾನ ಮಂಜೂರಾತಿ ನೀಡಲಾಗಿದ್ದು ಇದರನ್ವಯ RKVY ಯೋಜನೆಯಡಿ ಲಭ್ಯವಿರುವ ₹ 18.50 ಕೋಟಿಗಳ ಅನುದಾನವನ್ನು ಜಿಲ್ಲಾವಾರು ಬಿಡುಗಡೆ ಮಾಡಲಾಗಿದ್ದು ಹಾಗೂ ಕಾರ್ಯಕ್ರಮವು ಅನುಷ್ಠಾನ ಹಂತದಲ್ಲಿರುತ್ತದೆ.